ಬೆಟ್ಟದೊಡೆಯ ನಂಜುಂಡನಿಗೆ ಇಬ್ಬರು ಮಡದಿಯರು. ಹಿರಿಯವಳು ದೇವೀರಿ, ಕಿರಿಯವಳು ಅಕ್ಕಮ್ಮ. ಬೆಟ್ಟದ ಬದಿಯಲ್ಲಿ ಮನೆಮಾಡಿಕೊಂಡಿರುವ ಚೆಲುವೆ ಚಾಮುಂಡಿ ಒಂದು ದಿನ ರಸಿಕ ನಂಜುಂಡನ ಕಣ್ಣಿಗೆ ಬೀಳುತ್ತಾಳೆ. ನಂಜುಂಡ ಆ ಮಾತು ಈ ಮಾತು ಆಡುತ್ತಾ ತನ್ನ ಆಸೆಯನ್ನು ಹೊರಗೆಡಹುತ್ತಾನೆ.

ಬೆಟ್ಟದೊತ್ತಿನಲ್ಲಿ ಬೆರಣೇಯ ತಟ್ಟೋಳೆ
ನೇತುರದಾ ಗೊಂಬೆ ಬಲಗೈಲಿ। ಹಿಡಕೊಂಡು
ಸಂಗಕ್ಕೊಂದರಗಳಿಗೆ ಬರಲೇನೇ?

ಚಾಮುಂಡಿಗೊಬ್ಬ ಗಂಡನಿದ್ದಾನೆ. ಅವನು ದೊರೆಯ ದಂಡಿನಲ್ಲಿದ್ದಾನೆ. ಅವಳಿಗೆ ನಂಜುಂಡನ ಆಸೆ ನೋಡಿ ಭಯವಾಯಿತು.



ಪುರುಷರುಳ್ಳರು ನಾವು, ಎಂಡಿರುಳ್ಳರು ನೀವು
ನಮಸಂಗಕ್ಯಾಕ ಬರುತೀರಿ। ನಂಜುಂಡ
ಬರಿ ಎಪ್ರ ಯಾಕ ತರುತೀರಿ?

ಚಾಮುಂಡಿ ತೀರಾ ನಿರಾಕರಿಸಲಿಲ್ಲವೆಂದು ನಂಜುಂಡನಲ್ಲಿ ಆಸೆಯ ಎಳೆಯೊಂದು ಉಳಿದಿತ್ತು. ಅವನು ಒತ್ತಡ ಹೇರಿದ.

ಪುರುಷರಿದ್ದರೇನು, ಎಂಡರಿದ್ದರೇನು
ಸಂಗಕ್ಕೊಂದರಗಳಿಗೆ ಬರುವಾತ। ಚಾಮುಂಡಿ
ಬರುವಾಗ ತೆರಿಯೇ ಕದವಾನ್ನ

ಚಾಮುಂಡಿಗೆ ಸಿಕ್ಕಿ ಬೀಳುವ ಭಯ. ಅವಳು ಬೇಡಿಕೊಳ್ಳುತ್ತಾಳೆ.

ಆಳದೀಯ ಊಟಗೊಂಡು ಬಿಳದೀಯ ಒದುಕೊಂಡು
ಆಗಲು ನಮ್ಮನಿಗೇ ಬರಬ್ಯಾಡಿ। ನಂಜುಂಡ
ಬರಿದೂರ ನಮಗೆ ತರಬ್ಯಾಡಿ

ನಂಜುಂಡನಿಗೆ ಸಂತೋಷವಾಯಿತು. ಹಗಲು ಬರಬ್ಯಾಡಿ ಎನ್ನಲಿ. ರಾತ್ರಿ ಬರಬೇಡವೆನ್ನಲಿಲ್ಲವಲ್ಲಾ? ಆದರೂ ದೂರು ಬಂದೀತು ಎನ್ನುವುದು ತನ್ನ ಪೌರುಷಕ್ಕೆ ಅಪಮಾನ ಎಂದವನು ಭಾವಿಸಿದ.

ದೂರು ಬರಲೇಳೆ ಧೀರ ನಾನಾಗಿರೆ
ದೂರು ಒಗಲೇಳೆ ಮೈಸೂರ। ದೊರೆಗಂಟ
ನಾನೀರ ಮಟ ಭಯವೇನು?